ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **04.02.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು**:** ಆರೋಪಿತನ ಪರಃ ಶ್ರೀ ಕೆ**.**ಎಂ**.**ಆರ್**.** ವಕೀಲರ ಮೂಲಕ ಃ

ನಾನು ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಕೆ.ಎಸ್.ಆರ್.ಟಿ.ಸಿ. ಬಸ್‌ನ ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ತಂದೆಯು ಪೇಟೆ ಬೀದಿಯಲ್ಲಿ ಬಟ್ಟೆ ಅಂಗಡಿಯನ್ನು ಇಟ್ಟಿದ್ದರು. ಆರೋಪಿಯು ಟೂತ್ ಬ್ರಷ್ ಮತ್ತು ಸೋಪು ಹಾಗೂ ಇತ್ಯಾದಿ ಏಜೆನ್ಸಿಯಲ್ಲಿ ಮಾಡುತ್ತಿದ್ದರು, ಈಗ 2 -3 ಕೂಲಿ ಕೆಲಸ ಮಾಡುತ್ತಿದ್ದಾರೆ. ಸದರಿಯವರ ಆದಾಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ 35 ಸಾವಿರ ರೂಪಾಯಿ ವೇತನ ಬರುತ್ತದೆ. ನಾನು 2021 ರ ಸೆಪ್ಟೆಂಬರ್‌ನಲ್ಲಿ ಸಾಲ ನೀಡಿದ್ದು, ದಿನ ನೆನಪಿರುವುದಿಲ್ಲ. ಆರೋಪಿಯು ಸಿಂಡಿಕೇಟ್ ಬ್ಯಾಂಕ್‌ನ ಚೆಕ್‌ನ್ನು ನೀಡಿದ್ದರು. ಸಾಲ ಪಡೆದ ದಿನದಂದೇ ಆರೋಪಿಯು ನನಗೆ ಚೆಕ್‌ನ್ನು ನೀಡಿರುತ್ತಾರೆ. ಸಿಂಡಿಕೇಟ್ ಬ್ಯಾಂಕ್ ಕೆನರಾ ಬ್ಯಾಂಕ್‌ಗೆ ಮಿಲನ ಆದದ್ದು ಯಾವಾಗ ಎಂದು ನನಗೆ ಗೊತ್ತಿರುವುದಿಲ್ಲ. 2020 ರಲ್ಲಿಯೇ ಸಿಂಡಿಕೇಟ್ ಬ್ಯಾಂಕ್ ಕೆನರಾ ಬ್ಯಾಂಕ್‌ಗೆ ಮಿಲನ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯು 2020 ರಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆಯು ಬಟ್ಟೆ ವ್ಯಾಪಾರದ ಜೊತೆಗೆ ಬಡ್ಡಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯು ನಡೆಸುತ್ತಿದ್ದ ಬಟ್ಟೆಯ ಅಂಗಡಿಯ ಹೆಸರು ಪ್ರದೀಪ್ ಟೆಕ್ಸ್‌ಟೈಲ್ಸ್. ಸದರಿ ಅಂಗಡಿಯ ಪಕ್ಕದಲ್ಲಿ ಆರೋಪಿಯು ಎಂ.ಇ.ಎಸ್. ಪ್ರಾವಿಜನ್ ಸ್ಟೋರ್‌ನಲ್ಲಿ ದಿನಸಿ ಅಂಗಡಿಯಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಸಂದರ್ಭದಲ್ಲಿ ನನ್ನ ತಂದೆಯು ಆರೋಪಿಗೆ 20 ಸಾವಿರ ರೂಪಾಯಿ ಸಾಲ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಸಾಲದ ಭದ್ರತೆಗಾಗಿ ನನ್ನ ತಂದೆಯು ಆರೋಪಿಯಿಂದ ಸಿಂಡಿಕೇಟ್ ಬ್ಯಾಂಕ್‌ನ ನಿಪಿ 1 ಚೆಕ್‌ನ್ನು ಸೇರಿದಂತೆ 3 ಚೆಕ್‌ಗಳನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಪಡೆದಿದ್ದ ಚೆಕ್‌ನ್ನು ದುರುಪಯೋಗ ಪಡಿಸಿಕೊಂಡು ನನ್ನ ತಂದೆಯು ಮೃತರಾದ ನಂತರ ಆರೋಪಿಯ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ಆದಾಯ ತೆರಿಗೆಯನ್ನು ಪಾವತಿ ಮಾಡುವುದಿಲ್ಲ. ನಾನು ಆರೋಪಿಗೆ ಮೂರುವರೆ ಲಕ್ಷ ರೂಪಾಯಿ ಸಾಲ ನೀಡಿರುತ್ತೇನೆ ಎಂಬ ಸಂಬಂಧವಾಗಿ ನಮ್ಮ ಇಲಾಖೆಯ ಯಾವುದಾದರೂ ದಾಖಲೆಯಲ್ಲಿ ತೋರಿಸಿರುತ್ತೀರಾ ಎಂದರೆ ನಾನು ನಗದು ರೂಪದಲ್ಲಿ ಸಾಲ ನೀಡಿರುತ್ತೇನೆ. ನಾನು 2019 ರಲ್ಲಿ ನೌಕರಿಗೆ ಸೇರಿರುತ್ತೇನೆ. 20 ಸಾವಿರಕ್ಕೂ ಮೇಲ್ಪಟ್ಟು ಹಣದ ವ್ಯವಹಾರ ಮಾಡಬೇಕಾದರೆ ನಗದು ರೂಪದಲ್ಲಿ ಮಾಡಬಾರದು

ಎಂದು ನಿಯಮವಿದೆ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ಆರೋಪಿಯು ನನ್ನಿಂದ ಸಾಲವನ್ನು ಪಡೆಯದೇ ಇದ್ದರೂ ಸಹ ನನ್ನ ತಂದೆಯು ಆರೋಪಿಯಿಂದ ಪಡೆದುಕೊಂಡಿದ್ದ ಖಾಲಿ ಚೆಕ್‌ನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಇದು ಒಂದು ಚೆಕ್ ಪ್ರಕರಣವನ್ನು ಮಾತ್ರ ಸಲ್ಲಿಸಿರುತ್ತೇನೆ. ನಾನು ಹಲವಾರು ಚೆಕ್ ಪ್ರಕರಣಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.